# 8 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು

**ಸಿ.ಸಿ.ನಂ.31072/2018**

ಪಿರ್ಯಾದುದಾರರು ವಿರುದ್ಧ ಆರೋಪಿತರು

ವೈಯಾಲಿಕಾವಲ್ ಪೋಲೀಸ್ ಠಾಣೆ ಪ್ರಶಾಂತ್ ತಾನಾಜಿ ಪಾಟೀಲ್

ಃ ದೋಷಾರೋಪಣೆ ಃ

ನಾನು ಕೆ.ಎನ್.ಶಿವಕುಮಾರ, 8 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ, ಬೆಂಗಳೂರು, ಆರೋಪಿಯಾದ

ಪ್ರಶಾಂತ್ ತಾನಾಜಿ ಪಾಟೀಲ್
ಬಿನ್ ತಾನಾಜಿ ದತ್ತಾತ್ರೇಯ ಪಾಟೀಲ್
25 ವರ್ಷ, ನಂ.11, ಬಸವೇಶ್ವರ ಲೇಔಟ್
ದೊಂಬರಹಳ್ಳಿ, ಬೆಂಗಳೂರು

ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ-

ದಿಃ 21-08-2018 ರಂದು ಮಧ್ಯಾಹ್ಣ ಸುಮಾರು ಗಂಟೆಯಿಂದ ದಿನಾಂಕ 22-08-2018 ರಂದು ಮಧ್ಯಾಹ್ಣ ಸುಮಾರು 3.30 ಗಂಟೆಯ ಸಮಯದಲ್ಲಿ ವೈಯಾಲಿಕಾವಲ್ 12 ನೇ ಕ್ರಾಸ್ 4 ನೇ ಮುಖ್ಯರಸ್ತೆಯ ನಂ.223 ರಲ್ಲಿ ಗೋಡಂಬಿ ಗೋಡೋನ್ ನ ಬೀಗವನ್ನು ನಕಲಿ ಕೀ ಬಳಳಿ ಗೋಡನ್ ಒಳಗೆ ಪ್ರವೇಶಿಸಿರುತ್ತೀರಿ. ಕಾರಣ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 457 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಗೆ ಒಳಪಡುವಂತಹ ಶಿಕ್ಷಾರ್ಹವಾದ ಅಪರಾಧ ಮಾಡಿದ್ದೀರಿ ಎಂದು ಆಪಾದಿಸಲಾಗಿದೆ.

ಮೇಲೆ ಹೇಳಿದ ದಿನಾಂಕ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸದರಿ ಗೋಡನ್ ನಲ್ಲಿದ್ದ ಗೋಡಂಬಿ ತುಂಬಿರುವ 186 ಬಾಕ್ಸ್ ಗಳನ್ನು ಕಳವು ಮಾಡಿಕೊಂಡು ಹೋಗಿರುತ್ತೀರಿ. ಕಾರಣ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 380 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಗೆ ಒಳಪಡುವಂತಹ ಶಿಕ್ಷಾರ್ಹವಾದ ಅಪರಾಧ ಮಾಡಿದ್ದೀರಿ ಎಂದು ಆಪಾದಿಸಲಾಗಿದೆ.

ಮೇಲಿನ ದೋಷಾರೋಪಕ್ಕೆ ನಿಮ್ಮನ್ನು ಗುರಿಪಡಿಸಿ, ಈ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ನಡೆಯಬೇಕೆಂದು ನಿರ್ದೇಶಿಸಲಾಗಿದೆ.

ದಿಃ

**8 ನೇ ಅಪರ ಮುಖ್ಯ ಮಹಾನಗರ**
**ದಂಡಾಧಿಕಾರಿಗಳು, ಬೆಂಗಳೂರು**

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ 3ನೇ ನ್ಯಾಯಾಲಯ, ದಾವಣಗೆರೆ.
ಸಿ.ಸಿ.ನಂ 179/2017

ಫಿರ್ಯಾದುದಾರರು : ः ವಿರುದ್ಧ ः ಆರೋಪಿತರುः

ಗಾಂಧಿನಗರ ಪೊಲೀಸ್ ಠಾಣೆ,
ದಾವಣಗೆರೆ.

ಹನುಮಂತ ಬಿನ್ ಬಸವರಾಜಪ್ಪ,
ಮತ್ತು ಇತರರು.

ःःः ಆರೋಪಿತರ ಹೇಳಿಕೆ ःःः

ಪ್ರಶ್ನೆः1 ः ಈಗ ಓದಿ ಹೇಳಿದ ನಿಮ್ಮ ಮೇಲಿನ ದೋಷರೋಪ ನಿಮಗೆ ತಿಳಿಯಿತೆ?

ಉತ್ತರ ः

ಎ-1 ಎ-2

ಪ್ರಶ್ನೆः2 ः ಸದರಿ ದೋಷರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ ः

ಎ-1 ಎ-2

ಮೇಲೆ ನಮೂದು ಮಾಡಿದ ಆರೋಪಿತರ ಹೇಳಿಕೆಯನ್ನು ನನ್ನ ಉಪಸ್ಥಿತಿಯಲ್ಲಿ ತೆಗೆದುಕೊಂಡಿದ್ದು, ಸದರಿ ಹೇಳಿಕೆ ಆರೋಪಿತರು ನೀಡಿದ ನಿಜವಾದ ಹೇಳಿಕೆ ಇರುತ್ತದೆ.

ದಿः23-06-2017

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
3ನೇ ನ್ಯಾಯಾಲಯ, ದಾವಣಗೆರೆ.